ಅಂತರ ಅಷ್ಟೇ ಅನ್ನೋದನ್ನು ವಿವರಿಸಿ, ಯೋಗ, ಧ್ಯಾನ ಕಲಿಸಿ, ಅದನ್ನು ಇನ್ನಷ್ಟು ಪ್ರಖರಗೊಳಿಸುವ ವಿಧಾನವನ್ನು ಹೇಳಿಕೊಟ್ಟರು. ಅದನ್ನ ಸಾಧನೆ ಮಾಡಬೇಕೆಂದು ಯೋಚಿಸಿದಾಗ ಪ್ರಶಾಂತವಾದ, ನಾಗರಿಕ ಜನರಿಂದ ದೂರವಾದ ಈ ಜಾಗವನ್ನು ಆಯ್ದುಕೊಂಡೆ. ಆಗ ಹೇಳಿದೆನಲ್ಲ, ಆತ ಮಡೂರ, ಅವನ ಸಹಾಯದಿಂದ ಮಣ್ಣಿನ ಈ ಮನೆ ಕಟ್ಟಿದೆ. ಇಲ್ಲಿಂದ ಹತ್ತು ಮೈಲಿ ದೂರದ ದೇವನಳ್ಳಿಯಲ್ಲಿ ಒಂದೆರಡು ಅಂಗಡಿ, ಪೋಸ್ಟಾಫೀಸು, ಬ್ಯಾಂಕ್ ಉಂಟು. ತಿಂಗಳಿಗೊಮ್ಮೆ ದಾರಿಯಲ್ಲದ ದಾರಿಯಲ್ಲಿ ಅಲ್ಲಿಗೆ ಹೋಗಿ ನನ್ನ ಖಾತೆಯಲ್ಲಿನ ಹಣ ಪಡೆದು, ಅಗತ್ಯವಿದ್ದಷ್ಟು ಸಾಮಗ್ರಿ ತರುತ್ತೇನೆ. ಬೇಕೆಂದಾಗ ಮಡೂರನಿಗೆ ಹೇಳಿದರೆ ತಂದುಕೊಡುತ್ತಾನೆ. ಇಷ್ಟೇ ನನ್ನ ವಿವರ' ಎಂದವರು ಮತ್ತೆ ವೀಳ್ಯದೆಲೆಗೆ ಸುಣ್ಣ ಹಚ್ಚಿ, ಅಡಕೆ ಹೋಳಿನ ಜೊತೆ ಬಾಯಿಗಿಟ್ಟು, ತಂಬಾಕಿನ ಸಣ್ಣ ತುಂಡು ಬಾಯಿಗೆಸೆದು, 'ಈ ಕವಳದ ರೂಢಿಯಾಗಿದ್ದೂ ಇಲ್ಲಿಗೆ ಬಂದಮೇಲೇ' ಎಂದವರು ಒಮ್ಮೆ ಅಗಿದು, 'ನೀವು ಕೂಡ ಸಂತೋಷ ಎನ್ನುವ ಹೆಸರಿನವರಲ್ಲ. ನನ್ನಂತೆಯೇ ಹೆಸರು ಬದಲಿಸಿಕೊಂಡವರು, ಅಲ್ಲವೇ?' ಎಂದು ಕಿರುನಕ್ಕವರು ಏಕಾಏಕಿ ಗಂಭೀರವಾದರು.

ಚಕಿತನಾದ ಸಂತೋಷ ಉತ್ತರಿಸಹೊರಟವನು ಅವರ ಮುಖಮುದ್ರೆ ಗಮನಿಸಿ ಸುಮ್ಮನಾದ. ಕಣ್ಮುಚ್ಚಿ ಕೂತವರು ಕ್ಷೀಣ ಸ್ವರದಲ್ಲಿ, 'ಎಷ್ಟೇ ಪರಿಚಯಿಸಿಕೊಂಡರೂ ಪೂರ್ತಿಯಾಗಿ ಹೇಳಿಕೊಳ್ಳಲು ಸಾಧ್ಯವೇ ಇಲ್ಲ. ಅದು ಮನುಷ್ಯನಿಗೆ ಪ್ರಾಪ್ತವಾದ ಶಾಪ. ಒಂದು ರೀತಿಯಲ್ಲಿ ಅನಾಮಿಕನಾಗಿ ಉಳಿಯುವುದೇ ಸುಖ' ಎಂದರು.

ಸ್ವಲ್ಪ ಹೊತ್ತಿನ ಅನಂತರ, 'ಇಲ್ಲಿನ ಋಣ ತೀರುತ್ತ ಬಂದ ಹಾಗೇ ಕಾಣುತ್ತಿದೆ. ನಾಳಿನ ಮುಂಜಾವಿನಲ್ಲಿ ಪರಸ್ಪರ ಹೇಳಿಕೊಳ್ಳಲೂ ಸಾಧ್ಯವಾಗದ ಸಂಕಷ್ಟ ಎದುರಾಗಲಿದೆ. ಒಂದು ದೊಡ್ಡ ವಿಘ್ನದಿಂದ ದಾಟಿಬಂದ ನೀವು ನಾಳೆ ಹೇಗೆ ಬಚಾವಾಗುತ್ತೀರೋ?' ಎಂದು ಮಾತು ನಿಲ್ಲಿಸುತ್ತಿದ್ದಂತೆಯೇ ಧಡಧಡ ಎನ್ನುವ ಸಪ್ಪಳ ಆ ಮಳೆಗಾಳಿಯ ಅಬ್ಬರದಲ್ಲೂ ಮಾರ್ದನಿಸಿತು. ಅದನ್ನು ಕ್ಷಣಹೊತ್ತು ಆಲಿಸಿ, 'ನೀವು ಮಲಗಿ, ಭಯಪಡಬೇಡಿ' ಎಂದ ಮೂರ್ತಿರಾಯರು ಮತ್ತೆ ಮನೆಯೊಳಕ್ಕೆ ಸರಿದರು.

ಸಮಯ ಎಷ್ಟಾಯಿತು ಎನ್ನುವುದೇ ಗೊತ್ತಾಗದ ಅಯೋಮಯ ಸ್ಥಿತಿ. ವೇಳೆಯನ್ನು ತಿಳಿಸುವ ಯಾವ ಸಾಧನಗಳೂ ಅಲ್ಲಿರಲಿಲ್ಲ. ಕಾಲವೆನ್ನುವುದು ಯಾರ ಲೆಕ್ಕಾಚಾರಕ್ಕೂ ನಿಲುಕದ ಸಂದರ್ಭ. ಎಳೆವ ನಿದ್ದೆಯ ಮಂಪರು, ಆ ಜೊಂಪಿನಲ್ಲೇ ಅಸ್ಪಷ್ಟವಾದ ಕನಸುಗಳು. ಅರೆ ಎಚ್ಚರ, ನಿದ್ರೆಯಲ್ಲಿ ತೊಳಲಾಡುತ್ತಿದ್ದಾಗ ಅಂಗಳದಲ್ಲಿ ಕೂಗು, ಮಾತಿನ ಕಲರವ. ಸಂತೋಷ ಏಳುವಷ್ಟರಲ್ಲಿ ಕಂದೀಲು ಹಿಡಿದ ಮೂರ್ತಿರಾಯರು ಅಂಗಳದಲ್ಲಿ ನಿಧಾನಕ್ಕೆ ನಂದುತ್ತಿದ್ದ ಬೆಂಕಿಗೆ ಒಂದಿಷ್ಟು ಕಟ್ಟಿಗೆಯ ತುಂಡುಗಳನ್ನು ಒಟ್ಟುತ್ತ ಬೆಂಕಿಯನ್ನು ಪ್ರಜ್ವಲಗೊಳಿಸುವ ಯತ್ನದಲ್ಲಿದ್ದರು. ಆ ಅರೆಬೆಳಕಿನಲ್ಲಿ ಹತ್ತಾರು ಜನರ ಹಿಂಡು ಮಳೆಯಲ್ಲಿ ತೋಯ್ದು ನಡುಗುತ್ತ ನಿಂತಿತ್ತು. 'ಬೆಂಕಿಯ ಹತ್ತಿರ ಬನ್ನಿ' ಎಂದು ಮೂರ್ತಿರಾಯರು ಅವರನ್ನು ಕರೆದರು.

ನಿನ್ನೆ ಸಂತೋಷ, ಮನೀಷರನ್ನು ಇಲ್ಲಿಗೆ ತಂದು ತಲುಪಿಸಿದ ಮಡೂರ ಬೆಂಕಿಯ ಬಿಸಿಗೆ ಹುರುಪಾಗುತ್ತ, 'ಒಡೆಯಾ, ಹಳ್ಳ ತುಂಬಿ ಉಕ್ಕಿದೇರಾ, ಈ ಗುಡ್ಡದ ಬುಡಕ್ಕೂ ನೆರೆ ಬಂದದೇರಾ. ಯಾಕೋ ನೋಡ್ದೆ, ಎಲ್ಲರನ್ನು ಎಬ್ಬಿಸಿಕೊಂಡು, ಕೈಗೆ ಸಿಕ್ಕಷ್ಟು ಹಿಡಕೊಂಡು ಇಲ್ಲಿಗೆ ಬಂದ್ವಿ.' ಕಂಗಾಲಾದ ಆರ್ತ ಸ್ವರದಲ್ಲಿ ಹೇಳಿದ.

ವಾತಾವರಣ ಮಂದವಾಗಿ, ಒಂದಿಷ್ಟು ವಿಕಲ್ಪವಾಗಿದ್ದರೂ ನಸುಕಾಗುತ್ತಿದೆ ಎನ್ನುವ ಸಂಕೇತಗಳು ಸಹಜವಾಗೇ ಅನುಭವಕ್ಕೆ ಬರತೊಡಗಿದ್ದವು. ಮೂರ್ತಿರಾಯರು ಚುರುಕಾಗಿ ಓಡಾಡುತ್ತಿದ್ದರು. ದೊಡ್ಡದಾದ ಹರಿವಾಣದ ತುಂಬ ಅವಲಕ್ಕಿಗೆ ಉಪ್ಪಿನಕಾಯಿ ಕಲಸಿ ತಂದು ಮಡೂರನ ಬಳಗದವರ